ಬಂದಿರುತ್ತಾರೆ' ಎಂದು ಹೇಳಿದಳು. ನಾಳೆ ಬಿಟ್ಟು ನಾಡದ್ದು ನಡೆವ ಸಮಾರಂಭಕ್ಕೆ ಅಪ್ಪನ ಆತ್ಮಚರಿತ್ರೆ ಬಿಡುಗಡೆ ಮಾಡಲು ಬರುತ್ತಿದ್ದ ಚಂದ್ರಕಾಂತ ಪಾಟೀಲರ ಕರೆ.

ರಾತ್ರಿ ಹನ್ನೊಂದು ಗಂಟೆಯಾಯ್ತು!

ವೇದವತಿಗೆ ಅಪ್ಪನ ಆತ್ಮಚರಿತ್ರೆಯಲ್ಲಿ ಕೊನೆಯ ಭಾಗವೊಂದಿತ್ತಲ್ಲ; ಶಿವದೇವಿ ಮತ್ತು ಅಪ್ಪನ ನಡುವಿನ ಆಪ್ತತೆಯನ್ನು ಓದಿದಾಗ ಅದು ಹಿಡಿದು ನಿಲ್ಲಿಸಿತ್ತು. ಅಪ್ಪ ತನ್ನ ಬಗ್ಗೆ ಬರೆದದ್ದನ್ನು ಓದಿ ಕುಸಿದು ಹೋಗಿ ಮತ್ತೆ ಹೇಗೋ ತಿದ್ದುಪಡಿ ಮಾಡಿ ನಿಟ್ಟುಸಿರು ಬಿಟ್ಟು ಸಮಾಧಾನಿಯಾಗಿದ್ದಳು. ತನಗೇನೂ ಗೊತ್ತಾಗದ, ಯಾವ ಸುಳಿವು ಸಿಗದಂತೆ ಅಪ್ಪ ಶಿವದೇವಿಯನ್ನು ಹಚ್ಚಿಕೊಂಡು ಒಂದೂವರೆ ವರ್ಷ ಕಳೆದಿದ್ದು, ನಂತರ ಸಂಪೂರ್ಣ ದೂರವಾದದ್ದು. ಇದೇ ಅವಧಿಯಿರಬೇಕು ಅಪ್ಪ ಮೌನಕ್ಕೆ ತನ್ನನ್ನು ಒಪ್ಪಿಸಿಕೊಂಡದ್ದು. ಶಿವದೇವಿಯನ್ನು ಪತ್ತೆ ಹಚ್ಚಿ ಒಮ್ಮೆ ಕಂಡು, ಮಾತಾಡಬೇಕಿನಿಸಿತು.

## 5

'ಅಕ್ಕ ಬರ್ರಿ. ಚೆನ್ನಾಗಿದ್ದಿರೇನಕ್ಕ' ಶಿವದೇವಿ ತನ್ನ ಚಿಕ್ಕ ಮನೆಗೆ ಬಂದ ವೇದವತಿಯನ್ನು ಬರಮಾಡಿಕೊಂಡು ಕೂಡಿಸಿದಳು. ವೇದವತಿ ವಾರದ ಹಿಂದೆ ಶಿವದೇವಿ ಇರುವಿಕೆಯನ್ನು ಕೇಳಿ ತಿಳಿದು ಕರೆ ಮಾಡಿ ತನ್ನ ಪರಿಚಯ ಹೇಳಿಕೊಂಡು 'ಬರುವ ಆದಿವಾರ ನೀವು ಸಿಗುವುದಾದ್ರ ನಾನೇ ಬರ್ತೀನಿ' ಎಂದಿದ್ದಳು. ಶಿವದೇವಿ ಹೆಚ್ಚಿಗೇನೂ ಮಾತಾಡದೆ 'ನೀವಾದ್ರ ಬರ್ರಿ. ಇಲ್ಲ ನಾನು ಬಂದು ಕಾಣಲೇನು ಅಕ್ಕ' ಎಂದು ಕೇಳಿದ್ದಕ್ಕೆ 'ನಾನೇ ಬರ್ತೀನಿ' ಎಂದು ವಿಳಾಸ ಪಡೆದು ಬಂದು ಕಂಡಳು.

ಶಿವದೇವಿ ಸೀರೆ ಉಡುಗೆಯಲ್ಲಿ ಸರಳವಾಗಿದ್ದಳು. ನಿರಾಭರಣ ಸುಂದರಿ ಅನ್ನಿಸಿತು. ನಗುಮುಖ ವೇದವತಿಗೂ ಗೌರವ ಬಂದಿತು. 'ನಾನು ಅಪ್ಪ ಶಾಂತಲಿಂಗಪ್ಪನ ಮಗಳು. ಕಾಲೇಜಿನಲ್ಲಿ ಲೆಕ್ಚರರ್. ನಿಮ್ಗ ಪರಿಚಯವಿಲ್ಲ...'

'ಹೌದಕ್ಕ, ನಾನು ನಿಮ್ಮನ್ನ ಕೆಟ್ಟ ಸಂದರ್ಭದಾಗ ನೋಡಿದ್ದೀನಿ' ಎಂದು ಮುಖ ಚಿಕ್ಕದು ಮಾಡಿದಳು.

'ಹೌದೇನು? ಯಾವಾಗ?' ವೇದವತಿಗೆ ಕುತೂಹಲವಾಯ್ತು.

'ಅಮ್ಮ ತೀರಿಕೊಂಡಾಗ ನಾನೂ ಬಂದಿದ್ದೆ ಅಕ್ಕ'

'ಸರಿ' ಎಂದು ಸುಮ್ಮನಾದಳು.

'ಅಕ್ಕ, ಹಣ್ಣು ಕೊಡ್ತೀನಿ. ತಿನ್ನುವುದರಾಗ ಚಹಾ...'

'ಪರವಾಗಿಲ್ಲ. ನಿನ್ನ ಕಂಡದ್ದೇ ಖುಷಿ ನನ್ಗೆ. ನಿನ್ನ ಮಾತಾಡಿಸ್ಬೇಕು ಅನ್ನಿಸಿ ಬಂದಿದ್ದೀನಿ. ಪರ್ಸನಲ್ ವಿಷಯ. ನಿಮ್ಗ ನೋವಾದ್ರ ಬೇಡ...'

'ಅಕ್ಕ, ಶಿವು ಅಂತ ಕರಿರಿ. ನಾನು ನಿಮ್ಮ ತಂಗಿ ಸಮಾನಳು ಅಂತ ತಿಳಿರಿ'

'ಥ್ಯಾಂಕ್ಸ್ ಶಿವು. ಅಪ್ಪ ತೀರಿಕೊಂಡು ಎರಡು ವರ್ಷ ಕಳದೇ ಹೋದ್ವು. ನೀನು ಅಪ್ಪನನ್ನು ಕಂಡು ಮಾತಾಡಿದ್ದು ಯಾವಾಗ? ಪರಿಚಯ ಹೇಗಾಯ್ತು?' ವೇದವತಿ ಕೇಳಿದ್ದೇ ತಡ ಶಿವದೇವಿ ತಲೆ ಕೆಳಗೆ ಮಾಡಿದಳು. ಅರ್ಧ ನಿಮಿಷದ ಮ್ಯಾಲೆ ತಲೆ ಎತ್ತಿದಾಕ್ಷಣ ಕಣ್ಣಲ್ಲಿ ನೀರಿಳಿದವು.

'ಸಾರಿ ಶಿವು. ನಾನೂ ಹೆಣ್ಣು. ನಿನ್ನ ಅಕ್ಕ. ನಿನ್ಗ ಕಣ್ಣೀರು ತರಿಸಲಿಕ್ಕೆ ಇದನ್ನು ಕೇಳಲಿಲ್ಲವ್ವ' ಎಂದಳು.

'ತಪ್ಪಿಲ್ಲಕ್ಕ. ನಾನು ಅವರು ಪ್ರಿನ್ಸಿಪಾಲರಾಗಿದ್ದ ಜ್ಯೂನಿಯರ್ ಕಾಲೇಜಿಗೆ ಹೋಗಿ, 'ಅತಿಥಿ ಉಪನ್ಯಾಸಕಿ' ಕೆಲ್ಸಕ್ಕೆ ಅರ್ಜಿ ಕೊಟ್ಟೆ. 'ಮೊಬೈಲ್ ನಂಬರ್ ಅರ್ಜಿಯಲ್ಲಿದೆ. ಅವಕಾಶ ಬಿದ್ರೆ ಕರೆ ಮಾಡ್ತೀನಿ. ನೀವು ಹೋಗಿ ಬನ್ನಿ' ಅಂದ್ರು. ಅದೇ ಮೊದಲ ಸಲ ಕಂಡದ್ದು. ವಾರವಾಗಿರ್ಬೇಕು ಮೊಬೈಲ್‌ಗೆ ಕರೆ ಮಾಡಿ 'ಮೇಲಿನ ಅಧಿಕಾರಿಗಳಿಂದ ಒಪ್ಪಿಗೆ ಸಿಕ್ಕಿದೆ. ಪಾಠ ಮಾಡಲು ಬನ್ನಿ' ಎಂದರು. ನಾನು ಬಿ.ಎ., ಬಿ.ಎಡ್ ಮಾಡಿಕೊಂಡು ನಂತರ ಎರಡು ವರ್ಷ ಬಿಟ್ಟು ಎಂ.ಎ. ಪದವಿ ಓದಲು ವಿವಿಗೆ ಹೋದೆ. ಹಾಸ್ಟೆಲ್‌ನಲ್ಲಿದ್ದು ಮುಗಿಸಿಕೊಂಡೆ. ಆಗಲೇ ನನ್ಗ ಮೂವತ್ತು ವರ್ಷಗಳು ದಾಟಿದ್ದವು. ಹೈಸ್ಕೂಲ್ ಟೀಚರ್ ಆಗ್ಬೇಕೆಂದು ಆಸೆ ಪಟ್ಟೆ. ಪ್ರಯತ್ನ ಮಾಡಿದಂತೆಲ್ಲ ಅಲ್ಪ ಸ್ವಲ್ಪ ಹಿನ್ನಡೆ ಆಗುತ್ತಲೇ ಇತ್ತು. ಈಗ ನನ್ಗ ಆಸರೆ ಅಂದ್ರೆ ಅತಿಥಿ ಉಪನ್ಯಾಸಕಿ. ಅದರಿಂದ ಸಂಬಳ ಬರ್ತಿದೆ. ಪ್ರಿನ್ಸಿಪಾಲರಾಗಿದ್ದ ಶಾಂತಲಿಂಗಪ್ಪ ಸರ್ ನನ್ನನ್ನು ಮಮತೆಯಿಂದ ನೋಡಿಕೊಂಡ್ರು...'

'ಅಪ್ಪ ನಿನ್ನನ್ನು ಹೇಗೆ ಭಾವಿಸಿದ್ರು?'

'ಮಗಳು ಅನ್ನುವಂಗ ಅಂದ್ರೆ ಏನು ತಪ್ಪಾಗದಿಲ್ಲ...' ಕಣ್ಣೀರು ಇಳಿಯತೊಡಗಿದವು.

'ದೇವಿ, ನೀವು ಅಪ್ಪನ ಮನಿಗೆ ಬರ್ತಿದ್ರಾ? ಅಮ್ಮನನ್ನು ನೋಡಿದ್ರೇನು?'

'ನಾನು ಮನಿಗೆ ಬಂದಿಲ್ಲಕ್ಕ. ಅಮ್ಮನನ್ನು ನಮ್ಮ